

ಗುಂಡನಿಗೆ ಸ್ವಲ್ಪ ದಿನದಿಂದ 'ತನ್ನ ಹೆಂಡತಿಗೆ ಕಿವಿ ಕೇಳೋದಿಲ್ಲವಾ? ಮಾತನಾಡಿದರೆ ಅವಳಿಂದ ಯಾವುದೇ ಪ್ರತಿಕ್ರಿಯೆ ಇಲ್ಲವಲ್ಲ' ಎಂಬ ಅನುಮಾನ ಮೂಡಿತು. ಈ ವಿಚಾರವನ್ನು ತನ್ನ ಸ್ನೇಹಿತ ರಂಗನೊಡನೆ ಹೇಳಿಕೊಂಡ. ಅದಕ್ಕೆ ರಂಗ 'ಎಷ್ಟು ಅಂತರದಲ್ಲಿ ಅವಳಿಗೆ ಕಿವಿ ಕೇಳುವುದಿಲ್ಲ ಎಂದು ಪರೀಕ್ಷಿಸು' ಎಂದ. ಮನೆಗೆ ಬಂದವನೆ, ನಲವತ್ತು ಅಡಿ ಅಂತರದಲ್ಲಿ ನಿಂತು 'ಲೇ... ಇವತ್ತು ಏನು ಅಡುಗೆ ಮಾಡಿದ್ಯಾ..?' ಎಂದ. ಅವಳಿಂದ ಉತ್ತರವಿಲ್ಲ. 35 ಅಡಿಯ ಅಂತರದಲ್ಲಿ ಕೇಳಿದ, ಆಗಲೂ ಇಲ್ಲ. ಹತ್ತು ಅಡಿ ಅಂತರದಲ್ಲಿ ಕೇಳಿದ, ಆಗಲೂ ಉತ್ತರ ಇಲ್ಲ. ಕೊನೆಗೆ ರೋಸಿ ಹೋಗಿ ಪಕ್ಕ ಬಂದು ಅದೇ ಪ್ರಶ್ನೆ ಮುಖ ಗಂಟಾಕಿಕೊಂಡು ಕೇಳಿದ. ಹೆಂಡತಿ ಗುಡುಗಿದಳು: 'ಮೂರು ಸಾರಿ ಹೇಳಿದ್ದೀನಿ ಟೊಮ್ಯಾಟೊ ಸಾರು, ಸಾರು, ಸಾರೂಂತ. ಯಾಕೆ ನಿಮ್ಗೆ ಕಿವಿ ಕೇಳಲ್ವೆ...?'

(ಸಂಗ್ರಹ) **ಸುಮಾ ಕಳಸಾಪುರ, ಶಿವಮೊಗ್ಗ**

ಪಂಚಾಯತ್ ಕಚೇರಿಯ ಹೊರಗೆ ಹೀಗೊಂದು ಸೂಚನೆ ಬರೆಯಲಾಗಿತ್ತು. 'ಹೆಬ್ಬೆಟ್ಟು ಒತ್ತಿದ ಬಳಿಕ ಬೆರಳಲ್ಲಿ ಉಳಿದಿರುವ ಶಾಯಿಯನ್ನು ದಯವಿಟ್ಟು ಗೋಡೆಗೆ ಒರೆಸಬೇಡಿ.'

ಇದನ್ನೋದಿದ ಗೋಪಿ ಕೆಳಗೆ ಹೀಗೆ ಬರೆದ, 'ಮಹಾಶಯರೇ, ಮೇಲೆ ಬರೆದಿರುವ ಸೂಚನೆಯನ್ನು ಓದಲು ಬರುತ್ತಿದ್ದರೆ ಅವರೇಕೆ ಹೆಬ್ಬೆಟ್ಟು ಒತ್ತುತ್ತಿದ್ದರು?'

★★★

ಟೀಚರ್: ವಿದ್ಯಾರ್ಥಿಗಳೇ ಸ್ಕೂಲ್ ಮುಂದೆ ಯಾರಾದರೂ ಬಾಂಬ್ ಇಟ್ಟು ಹೋದರೆ ಏನು ಮಾಡುತ್ತೀರಿ?

ಕಿಲಾಡಿ ಕಿಟ್ಟು: ಒಂದೆರಡು ದಿನ ಕಾದು ನೋಡುತ್ತೇವೆ ಟೀಚರ್... ಯಾರೂ ತಗೊಂಡು ಹೋಗಿಲ್ಲಾಂದ್ರೆ ಆಮೇಲೆ ಸ್ಟಾಫ್ ರೂಂ ಒಳಗೆ ತಂದು ಇಡುತ್ತೇವೆ!

★★★

ಪ್ಲಂಬರ್: ನಿಮ್ಮ ನಲ್ಲಿ ಸರಿಯಾಯಿತು ಸರ್, ನನ್ನ ಫೀಸ್ 700 ರೂಪಾಯಿ.'

ಎಂಜಿನಿಯರ್: ಏನು, ಒಂದು ಗಂಟೆಯ ಕೆಲಸಕ್ಕೆ 700 ರೂಪಾಯಿಯೆ? ನನ್ನ ಫೀಸೂ ಅಷ್ಟಿಲ್ಲ.

ಪ್ಲಂಬರ್: ಸರ್, ನಾನು ಎಂಜಿನಿಯರ್ ಆಗಿದ್ದಾಗ ನನ್ನದೂ ಇಷ್ಟಿರಲಿಲ್ಲ...!

★★★

ತನ್ನ ತಾತ ಮರಣ ಹೊಂದಿದ ಸುದ್ದಿ ಪ್ರಕಟಿಸಲು ಜಿಪುಣ ಗೋಪಿ ಪತ್ರಿಕೆಯ ಕಚೇರಿಗೆ ಫೋನಾಯಿಸಿದ.

ಕಚೇರಿ ಗುಮಾಸ್ತ: ಒಂದು ಪದಕ್ಕೆ 50 ರೂಪಾಯಿ ಆಗುತ್ತದೆ.

ಗೋಪಿ: ಸರಿ, 'ತಾತ ಮರಣಿಸಿದರು' ಎಂದಷ್ಟೇ ಬರೆಯಿರಿ.

ಕಚೇರಿ ಗುಮಾಸ್ತ: ಆಗಲ್ಲ ಸಾರ್, ಕನಿಷ್ಠ ಐದು ಪದಗಳಾದರೂ ಇರಬೇಕು.

ಗೋಪಿ: ಹಾಗಾದರೆ, 'ತಾತ ಮರಣಿಸಿದರು, ಅವರ ಗಾಲಿಕುರ್ಚಿ ಮಾರಾಟಕ್ಕಿದೆ' ಎಂಬುದಾಗಿ ಪ್ರಕಟಿಸಿರಿ..!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

ಸೀತಾ: ನೀನು ನಿನ್ನ ಮಗನ ಬೆರಳು ಚೀಪುವ ಅಭ್ಯಾಸವನ್ನು ಹೇಗೆ ಬಿಡಿಸಿದೆ?

ಗೀತಾ: ಅವನ ಚಡ್ಡಿಯನ್ನು ಸ್ವಲ್ಪ ಸಡಿಲವಾಗಿ ಹೊಲಿಸಿದೆ.

★★★

ಪತಿ ಪತ್ನಿ ಜಂಟಿ ಖಾತೆ ತೆಗೆಯಲು ಬ್ಯಾಂಕ್‌ಗೆ ಹೋದರು. 'ನಮ್ಮಿಬ್ಬರ ಹೆಸರಿನಲ್ಲಿ ಒಂದು ಜಂಟಿ ಖಾತೆಯನ್ನು ತೆಗೆಯಬಹುದೇ?' ಎಂದು ಮ್ಯಾನೇಜರ್‌ರನ್ನು ಕೇಳಿದರು.

'ತೆಗೆಯಬಹುದು' ಮ್ಯಾನೇಜರ್ ಎಂದ.

'ಧನ್ಯವಾದಗಳು. ಆ ಖಾತೆಯಿಂದ ನಮಗೆ ಸಿಗುವ ಸೌಲಭ್ಯಗಳೇನು?' ಎಂದು ಮ್ಯಾನೇಜರ್‌ನನ್ನು ಕೇಳಿದರು.

'ಪತಿ ಖಾತೆಗೆ ಹಣ ತುಂಬುತ್ತ ಹೋಗಬಹುದು. ಪತ್ನಿ ಅದನ್ನು ಖಾಲಿ ಮಾಡುತ್ತ ಇರಬಹುದು' ಮ್ಯಾನೇಜರ್ ಹೇಳಿದ.

★★★

ಪತ್ನಿ: ಕರೆಂಟು ಹೋಯಿತು. ತುಂಬಾ ಸೆಖೆ

ಪತಿ: ಕರೆಂಟು ಹೋದರೆ ಮೇಣದ ಬತ್ತಿ ಹಚ್ಚಿ, ಫ್ಯಾನ್ ಹಾಕು.

ಪತ್ನಿ: ಪುನಃ ಅದೇ ಮೂರ್ಖತನದ ಮಾತು, ಫ್ಯಾನ್ ಹಾಕಿದರೆ ಮೇಣದ ಬತ್ತಿ ಆರಿಹೋಗುವುದಿಲ್ಲವೆ?

★★★

ಪತ್ನಿ: ನೀವು ಸ್ವರ್ಗಕ್ಕೆ ಹೋದರೆ ಅಲ್ಲಿ ನಿಮಗೆ ಯಾರು ದೊರೆಯುತ್ತಾರೆ?

ಪತಿ: ಅಪ್ಸರೆಯರು.



ಪತ್ನಿ: ಒಂದು ವೇಳೆ ನಾನು ಸ್ವರ್ಗಕ್ಕೆ ಹೋದರೆ ನನಗೆ ಯಾರು ಸಿಗುತ್ತಾರೆ?

ಪತಿ: ಮಂಗಗಳು.

ಪತ್ನಿ: ಇದು ತುಂಬ ಅನ್ಯಾಯ. ಗಂಡಸರಿಗಾದರೆ ಅಲ್ಲಿಯೂ ಅಪ್ಸರೆಯರು ಇಲ್ಲಿಯೂ ಅಪ್ಸರೆಯರು. ಆದರೆ ಹೆಂಗಸರಿಗೆ ಇಲ್ಲಿಯೂ ಮಂಗಗಳು ಅಲ್ಲಿಯೂ ಮಂಗಗಳೇ?

★★★

ಒಂದು ಕಚೇರಿಯ ಕರ್ಮಚಾರಿಯೊಬ್ಬ ಒಂದು ದಿನ ತನ್ನ ಬಾಸ್‌ಗೆ ಹೇಳಿದ 'ಸಾರ್, ನಾಳೆಯಿಂದ ನಾನು ಏಳು ಗಂಟೆಗೆ ಮನೆಗೆ ಹೋಗುತ್ತೇನೆ.'

'ಏಳು ಗಂಟೆಗೆ ಮನೆಗೆ ಹೋಗಿ ಏನು ಮಾಡುವೆ?' ಬಾಸ್ ಕೇಳಿದ.

'ನೀವು ಕೊಡುವ ಸಂಬಳ ನನಗೆ ಸಾಕಾಗುವುದಿಲ್ಲ. ಆದ್ದರಿಂದ ರಾತ್ರಿ ಆಟೋರಿಕ್ಷಾ ಓಡಿಸುತ್ತೇನೆ' ಎಂದ ಕಾರ್ಮಿಕ.

'ಒಂದು ವೇಳೆ ರಾತ್ರಿ ನಿನಗೆ ಹಸಿವೆಯಾದರೆ ನನ್ನ ಪಾವ್‌ಬಜಿ ಅಂಗಡಿಗೆ ಬಾ' ಬಾಸ್ ಹೇಳಿದ.

★★★

ಒಂದು ರಾತ್ರಿ ಅಜ್ಜಿಯ ಫೋನಿಗೆ 'ಬ್ಯೂಟಿಫುಲ್' ಎಂಬ ಮೆಸೇಜ್ ಬಂತು. ಗಡಿಬಿಡಿಸಿ ಎದ್ದ ಅಜ್ಜ ಮೆಸೇಜ್ ಓದಿ ಕಿಡಿ ಕಿಡಿಯಾದ.

'ನನ್ನ ಬೆನ್ನ ಹಿಂದೆ ಏನೇನು ನಡೆಯುತ್ತಿದೆ' ಎಂದು ಅಜ್ಜಿಯನ್ನು ದಬಾಯಿಸಿದ. ಅಜ್ಜಿಗೂ ತುಂಬ ಆತಂಕವಾಯಿತು. ಮೊಬೈಲ್ ಕೈಗೆತ್ತಿಕೊಂಡು ನೋಡಿದಾಗ ವಿಷಯವೇನೆಂದು ತಿಳಿಯಿತು.

'ಕನ್ನಡಕ ಹಾಕಿಕೊಂಡು ಮೆಸೇಜನ್ನು ಇನ್ನೊಮ್ಮೆ ಓದಿ' ಎಂದಳು ಅಜ್ಜಿ. ಕನ್ನಡಕ ಹಾಕಿಕೊಂಡು ಮೆಸೇಜನ್ನು ಇನ್ನೊಮ್ಮೆ ಓದಿದ ಅಜ್ಜ. ಅದರಲ್ಲಿ 'ಬ್ಯಾಟರಿ ಫುಲ್' ಎಂದು ಬರೆದಿತ್ತು.

(ಸಂಗ್ರಹ) **ಮುರಲೀಧರ ಕುಲಕರ್ಣಿ, ಬೀದರ್**